ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

11. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

(ಅ) ಸಚಿವರಿಂದ ಸ್ಪಷ್ಟೀಕರಣ

ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ನಿಯಂತ್ರಣ (ತಿದ್ದುಪಡಿ) ವಿಧೇಯಕ 2002ರ ಕನ್ನಡ ಪ್ರತಿ ಬಗ್ಗೆ.

ಅಧ್ಯಕ್ಷರು :- ಈಗ ಮಾನ್ಯ ಚಂದ್ರೇಗೌಡರು ಒಂದು ಸ್ಪಷ್ಟೀಕರಣವನ್ನು ಕೊಡುತ್ತಾರೆ.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :- ಮಾನ್ಯ ಎಸ್.ಎಸ್. ಪಾಟೀಲರಿಗೆ ಒಂದು ಕ್ಲಾರಿಫಿಕೇಷನ್ ಕೊಡುತ್ತೇನೆ. ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ನಿಯಂತ್ರಣ (ತಿದ್ದುಪಡಿ) ವಿಧೇಯಕ, 2002ನ್ನು ಮಂಡನೆ ಮಾಡಿದಾಗ, ಅವರು ಮೂಲ ಶಾಸನ ಕನ್ನಡದಲ್ಲಿಲ್ಲ ಎಂದು ಹೇಳಿದ್ದರು. ಅದರ ಬಗ್ಗೆ ವಿವರಣೆ ಕೊಡುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ :- ಕನ್ನಡದಲ್ಲಿ ಇಲ್ಲ ಎಂದು ಹೇಳಲಿಲ್ಲ. ಮಾರುಕಟ್ಟೆಯಲ್ಲಿ ಸಿಗುತ್ತದೆ. ನಮಗೆ ಕನ್ನಡ ಆವೃತ್ತಿ ಬೇಕಾಗಿದೆ, ಅದನ್ನು ಲೈಬ್ರರಿಯಲ್ಲಿ ಇಟ್ಟಿಲ್ಲ, ಎಂದು ಹೇಳಿದ್ದೆವು.

ಶ್ರೀ ಡಿ.ಬಿ. ಚಂದ್ರೇಗೌಡ :- ಹಾಗಾದರೆ ವಿವರಣೆ ಕೊಡುವುದು ಬೇಡವೇ?

ಶ್ರೀ ಎಸ್.ಎಸ್. ಪಾಟೀಲ್ :- ತಾವು ವಿವರಣೆ ಕೊಡಿ.

ಶ್ರೀ ಡಿ.ಬಿ. ಚಂದ್ರೇಗೌಡ :- ಈ ಕಾಯಿದೆ ಭಾಷಾಂತರವಾಗಿ ಅಚ್ಚಿಗೆ ಹೋಗಿದೆ. ನಾವು ಕಳುಹಿಸಿರುವ ಮೊದಲನೇ ಕರಡು ಪ್ರತಿಯನ್ನು ಓದುವ ಕೆಲಸ ಪ್ರಾರಂಭವಾಗಿದೆ. ಏಕೆಂದರೆ, ಅಷ್ಟು ಸುಲಭದಲ್ಲಿ ತರ್ಜುಮೆ ಆಗುವುದಿಲ್ಲ. ಭಾಷೆ ಮತ್ತು ಅದರಲ್ಲಿ ಬರತಕ್ಕಂಥ ಭಾವನೆಗಳು, ಅಭಿಪ್ರಾಯಗಳು ಎಲ್ಲವೂ ಸರಿಯಾಗಿರಬೇಕು ಎನ್ನುವ ಉದ್ದೇಶದಿಂದ ಅದನ್ನು ಓದಲಾಗುವುದು. ಆದ್ದರಿಂದ, ಈಗ ನಾವು ತಂದಿರುವ 8 ಮತ್ತು 10ರ ತಿದ್ದುಪಡಿಗಳನ್ನು ಒಳಗೊಂಡಂತೆ ಇದರ ಕನ್ನಡದ ಆವೃತ್ತಿಯನ್ನು ಇನ್ನು 2-3 ದಿನಗಳಲ್ಲಿ ಅಚ್ಚಿಗೆ ಕಳುಹಿಸಿಕೊಡುತ್ತೇವೆ. ಅದು ಆದತಕ್ಷಣ ಮೊದಲನೇ ಕಾಪಿಯನ್ನು ತಮಗೇ ಕಳುಹಿಸುತ್ತೇವೆ.

ಅಧ್ಯಕ್ಷರು :- ವೆರಿಗುಡ್.

(ಆ) ಬೆಂಗಳೂರು ಜಲ ಮಂಡಳಿಗೆ ಸಂಬಂಧಪಟ್ಟ ವಿಷಯದ ಪ್ರಸ್ತಾಪ

ಶ್ರೀ ಜಗದೀಶ್ ಶೆಟ್ಟರ್ :- ಮಾನ್ಯ ಅಧ್ಯಕ್ಷರೇ, ನಿಯಮ-69ರಡಿಯಲ್ಲಿ ಬೆಂಗಳೂರು ಜಲಮಂಡಳಿಗೆ ಸಂಬಂಧಪಟ್ಟ ವಿಚಾರವನ್ನು ತೆಗೆದುಕೊಳ್ಳಬೇಕೆಂದು ಕೇಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ :- ಬಹಳ ದೊಡ್ಡ ಅವ್ಯವಹಾರ ಆಲ್ಲ ನಡೆದಿದೆ. ಕೋಟ್ಯಾಂತರ ರೂಪಾಯಿಗಳ ಅಡಕವಾಗಿದೆ. ದಯವಿಟ್ಟು ಅದನ್ನು ಚರ್ಚೆಗೆ ತೆಗೆದುಕೊಳ್ಳಬೇಕು.

ಅಧ್ಯಕ್ಷರು :- ಮುಖ್ಯಮಂತ್ರಿಗಳು ನನಗೆ ಪತ್ರ ಬರೆದಿದ್ದಾರೆ. ಇದನ್ನು ಸೋಮವಾರ ಅಥವಾ ಮಂಗಳವಾರ ತೆಗೆದುಕೊಳ್ಳೋಣ ಎಂದು ತಿಳಿಸಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ :- ನಾಳೆ ತೆಗೆದುಕೊಳ್ಳುತ್ತೇನೆ ಎಂದು ತಾವೇ ನಿನ್ನೆ ಹೇಳಿದಿರಿ.

ಅಧ್ಯಕ್ಷರು :- ಸರ್ಕಾರ ಆಲೋಚನೆ ಮಾಡಿ ಹೇಳಬೇಕಲ್ಲವೇ? ಅವರು ಒಪ್ಪಬೇಕಲ್ಲವೇ?

ಶ್ರೀ ಪಿ.ಜಿ.ಆರ್. ಸಿಂಧ್ಯ :- ನಾವು ಹೇಳುವುದನ್ನು ಹೇಳಬೇಕಲ್ಲವೇ?

ಶ್ರೀ ಡಿ.ಬಿ. ಚಂದ್ರೇಗೌಡ :- ಮಾನ್ಯ ಮುಖ್ಯಮಂತ್ರಿಗಳು ಮೇಲ್ಮನೆಯಲ್ಲಿ ಉತ್ತರ ಹೇಳುತ್ತಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ :- ಮೇಲ್ಮನೆಯಲ್ಲಿ ಉತ್ತರವಾಗಿ, ಎಲ್ಲಾ ಮುಗಿದ ಮೇಲೆ ಇಲ್ಲಿಗೆ ಬರುವುದೇ?

ಶ್ರೀ ಡಿ.ಬಿ. ಚಂದ್ರೇಗೌಡ :- ಬಜೆಟ್ ಪಾಸ್ ಆಗುವುದು ಬೇಡವೇ?

ಶ್ರೀ ಪಿ.ಜಿ.ಆರ್. ಸಿಂಧ್ಯ :- ಬಜೆಟ್ ಪಾಸ್ ಆಯಿತಲ್ಲಾ.

5.30 ಪಿ.ಎಂ.

ಶ್ರೀ ಡಿ.ಬಿ. ಚಂದ್ರೇಗೌಡ :- ಆಯಿತು, ಅಲ್ಲಿ ಚರ್ಚೆ ಆಯಿತು. ಇಲ್ಲಿ ಚರ್ಚೆ ಮಾಡುವುದಕ್ಕೆ ಮುಕ್ತ ಮನಸ್ಸಿನಿಂದ ಇದ್ದೇವೆ. ಯಾವುದೇ ವಿಚಾರಕ್ಕೂ ಬೇಕಾದರೂ ಇಲ್ಲಿ ಮುಕ್ತವಾಗಿ ಚರ್ಚೆ ಮಾಡುತ್ತೇವೆಂದು ತಮ್ಮ ಸಮ್ಮುಖದಲ್ಲಿ ಹೇಳುವುದಕ್ಕೆ ನಾನು ಬಯಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧಪಕ್ಷದ ನಾಯಕರು) :- ಮಾನ್ಯ ಅಧ್ಯಕ್ಷರೆ, 5ನೇ ತಾರೀಖು ಚರ್ಚೆಗೆ ಅವಕಾಶ ಮಾಡಿಕೊಡುತ್ತೇವೆಂದು ಹೇಳಿದ ಮೇಲೂ ಮತ್ತೆ ತಾವು ಏಕೆ ಹೇಳುತ್ತಿದ್ದೀರಿ ಎಂಬುದು ನನಗೆ ಅರ್ಥವಾಗುತ್ತಿಲ್ಲ. ನಾಳೆ ಬೆಳಿಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ :- ಮಾನ್ಯ ಅಧ್ಯಕ್ಷರೆ, ನಾಳೆ ಬೆಳಿಗ್ಗೆ ಚರ್ಚೆಗೆ ಅವಕಾಶ ಮಾಡಿಕೊಡಿ ಸ್ವಾಮಿ.

ಶ್ರೀ ಡಿ.ಬಿ. ಚಂದ್ರೇಗೌಡ :- ಮಾನ್ಯ ಅಧ್ಯಕ್ಷರೆ, ನಾಳೆ ಬೆಳಿಗ್ಗೆ ಚರ್ಚೆಗೆ ತೆಗೆದುಕೊಳ್ಳಲಿ. ನನ್ನದೇನೂ ಅಭ್ಯಂತರವಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ :- ಮಾನ್ಯ ಅಧ್ಯಕ್ಷರೆ, ನೋಡಿ, ನಾಳೆ ಬೆಳಿಗ್ಗೆ ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ಒಪ್ಪಿಕೊಂಡಿದ್ದಾರೆ.

ಅಧ್ಯಕ್ಷರು :- ಸರ್ಕಾರದವರು ಒಪ್ಪಿಕೊಂಡರೆ ನನ್ನದೇನೂ ಅಭ್ಯಂತರವಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ :- ಕೆಲವು ಸಂದರ್ಭಗಳಲ್ಲಿ ನಮ್ಮ ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ಬಹಳ ರೀಸನಬಲ್ ಆಗಿ ಇರುತ್ತಾರೆ. ನಾಳೆ ಬೆಳಿಗ್ಗೆ ಶೂನ್ಯ ವೇಳೆಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಿ ಸ್ವಾಮಿ. 10 ನಿಮಿಷ ಪ್ರಸ್ತಾವನೆ, ಮುಕ್ಕಾಲು ಗಂಟೆ ಚರ್ಚೆ ಅಷ್ಟೆ.

ಅಧ್ಯಕ್ಷರು :- ತಾವೆಲ್ಲಾ ಅಷ್ಟು ಸಮಯದೊಳಗೆ ಮುಗಿಸುವುದಾದರೆ ದಿವಸಕ್ಕೆ ಇನ್ನೂ ಎರಡು ಮೂರು ವಿಷಯಗಳನ್ನು ಬೇಕಾದರೆ ತೆಗೆದುಕೊಳ್ಳಬಹುದು.

ಶ್ರೀ ಪಿ.ಜಿ.ಆರ್. ಸಿಂಧ್ಯಾ :- ಸರಿ, ತಾವು ಅವಕಾಶ ಮಾಡುವುದಕ್ಕಾಗುವುದಿಲ್ಲ ಎಂದು ಹೇಳಿದರೆ ನಾವು ಚರ್ಚೆಯನ್ನು ಮಾಡುವುದಿಲ್ಲ ಬಿಡಿ.

ಶ್ರೀ ಡಿ.ಬಿ. ಚಂದ್ರೇಗೌಡ :- ಮಾನ್ಯ ಅಧ್ಯಕ್ಷರೆ, ಈ ವಿಚಾರವನ್ನು ನಾಳೆ ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ. ಆದರೆ ಮಾನ್ಯ ಮುಖ್ಯಮಂತ್ರಿಗಳಿಂದಲೇ ಉತ್ತರ ಬೇಕೆಂದು ಹೇಳಿದರೆ ತಾವು ಹೇಳಿದ ಹಾಗೆ ಸೋಮವಾರ ಅಥವಾ ಮಂಗಳವಾರ ಚರ್ಚೆಗೆ ತೆಗೆದುಕೊಳ್ಳಬೇಕಾಗುತ್ತದೆ. ಏಕೆಂದರೆ ಮಾನ್ಯ ಮುಖ್ಯಮಂತ್ರಿಗಳು ಇರುವುದಿಲ್ಲ. ಆದಕ್ಕಾಗಿ ತಮ್ಮ ಮೂಲಕ ಮಾನ್ಯ ಸದಸ್ಯರ ಗಮನಕ್ಕೆ ತರುತ್ತಿದ್ದೇನೆ.